# ನಂಬಿಕೆಯ ನೂಲು

■ ಬಸು ಬೇವಿನಗಿಡದ
ಕಲೆ: ಎಚ್.ಎಸ್. ಮೋನಪ್ಪ



## ಮಳೆಗಾಗಿ ಪರಿತಪಿಸುವ ಜನ

‘ಹೌದು ಗೌರಿ. ನೀ ಹೇಳಿದಂಗ ಕಣ್ಣೆನಿಂದನ ಮಾತಾಡಿದೆ. ಅವರೂ ಬರಾಕ ತಯಾರಿದ್ರು. ಆದರ ಏನು ಮಾಡೋದು? ಅವರು ಬರೋದ್ರಂದ ನನ್ನ ಮೈಗೆ ಸುತ್ತಿಕೊಂಡು ಬರ್ತೇವೆ ಅಂದ್ರು. ನಾಗಕನ್ನೆ ಅಂದ್ರ ಆಕೀನ ಮೈಗೆ ಸುತ್ತಿಕೊಂಡೆ ಬರಬೇಕಲ್ಲ? ಆ ಪ್ರಕಾರ ದಪ್ಪ ದಪ್ಪ ಹಾಂವು ಸುತ್ತಿಕೊಂಡು ಬಂದಿದ್ರ ನೀವು ಇಷ್ಟೊತ್ತಿಗೆ ಹೆದರಿ ಊರು ಬಿಟ್ಟು ಹೋಗಿರತಿದ್ರಿ.’

‘ಅಲಾ ಇವನ, ಪಾತಾಳಕ್ಕೆ ಹೋಗಿ ಎಷ್ಟೆಲ್ಲಾ ಮಾತಾಡಲಿಕ್ಕೆ ಕಲಿತು ಬಂದಾನ...’ ಅಲ್ಲಿಗೆ ಬಂದಿದ್ದ ದುಂಡಪ್ಪಕಾಕಾ ಇನ್ನೂ ಹಸಿ ಅರಿವೆಯಲ್ಲಿಯೆ ನಿಂತಿದ್ದ ಅವನನ್ನು ಕರೆದುಕೊಂಡು ಮನೆಯ ಕಡೆಗೆ ನಡೆದ. ನಾಗಣ್ಣನಲ್ಲಿ ಎಷ್ಟೊಂದು ನಯ, ವಿನಯ. ಮಾಯಕ್ಕ ಅವನಿಗೆ ‘ಇದು ನನ್ನ ಕಾಣಿಕೆ’ ಎಂದು ಏನೋ ಸ್ವಲ್ಪ ದುಡ್ಡು ಕೊಡಲು ಹೋದಳು. ಆತ ‘ಏನು ಯಕ್ಕಾ ನೀನು? ಯಾಕ ನನ್ನನ್ನ ಇನ್ನಷ್ಟು ಸಣ್ಣಾಂವ ಮಾಡಾಕೇನು? ನೀನು ಹಂಗೇನಾದ್ರೂ ರೊಕ್ಕ ಕೊಡಾಕ ಇದೇ ರೀತಿ ಒಳ್ಳೊಳ್ಳೆಯ ಒತ್ತಾಯ ಮಾಡಿದ್ರ ಆ ಸರ ಇಸಗೊಂಡು ಹೋಗಿ ಮತ್ತ ಅದೇ ಬಾಂವಿಯೊಳಗ ಒಗದು ಬರ್ತೇನಿ ನೋಡು. ಸುಮ್ಮನಿರ್ತಿಯಿಲ್ಲೋ?’ ಅವನ ದೊಡ್ಡ ಮನಸ್ಸನ್ನು ತಾನೇಕೆ ಅಳೆಯಲು ಹೋದೆ? ಮಾಯಕ್ಕ ಕೃತಜ್ಞತಾಪೂರ್ವಕವಾಗಿ ಕೊಟ್ಟ ಚಹಾ ಕುಡಿದು ಹೋದ. ನಾಗಣ್ಣ ರೂಪವಂತ ಅದಾನ, ತುಂಬಿ ತುಳುಕುವ ಯೌವನ ಐತಿ. ಆದರೂ ಅವನ ನಸೀಬು ಕೆಟ್ಟದ್ದೆಂದು ಮಾಯಕ್ಕನಿಗೆ ಒಂದೊಂದು ಸಲ ಅನಿಸುವುದು. ಅವನಿಗೆ ಮದುವೆ ಗೊತ್ತಾಗಿತ್ತು. ಇನ್ನೊಂದು ತಿಂಗಳಲ್ಲಿ ಮದುವೆಯನ್ನು ಗೊಡಚಿ ವೀರಭದ್ರೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಮಾಡುವುದೆಂದು ನಿರ್ಧಾರ ಮಾಡಲಾಗಿತ್ತು. ಹುಡುಗಿ ಇಲ್ಲಿಯೇ ಬೈಲಹೊಂಗಲ ಹತ್ತಿರದ ಪಟ್ಟಿಹಾಳ ಗ್ರಾಮದವಳು. ಆದರೆ ಮದುವೆಗೆ ಹದಿನೈದು ದಿನ ಇರುವಾಗ ಹುಡುಗಿ ಪಾರವ್ವ ಇವನನ್ನು ಒಲ್ಲೆ ಅಂದಳಂತೆ. ಅನೇಕ ಹಿರಿಯರು ಹೋಗಿ ಅವಳ ಮನವೊಲಿಸಲು ನೋಡಿದರು. ಆದರೆ ಹುಡುಗಿಯದು ಒಂದೇ ಹಟ. ತಾನು ಒಲ್ಲೆ. ಯಾಕೆ ಎನ್ನುವುದನ್ನು ಕೇಳಬೇಡಿ. ಅವಳ ಅಪ್ಪಅವ್ವ ಮತ್ತು